ಕೈಲಿದ್ದ ಸೈಕಲ್ ಚಕ್ರ ಹೊಡೆವ ಮೋಟು ಕೋಲು, ತೆಳ್ಳನೆಯ ಬಿದಿರುಕಡ್ಡಿಯಂಥ ಕೋಲು ಆ ನಾಯಿಗಳನ್ನು ಹೆದರಿಸಲು ಸಹ ಸಾಲುತ್ತಿರಲಿಲ್ಲ. ರಾಯರಿಗೆ ಅವನ ಪಡಿಪಾಟಲು ನೋಡಿ ನಗು ಬಂತು. ಕರುಣೆಯೂ ಬಂದಿತು. ನಾಯಿ ಓಡಿಸಲು ಕಲ್ಲು, ಹಂಚಿನ ಪುಳಕೆ, ಇಟ್ಟಿಗೆ ಚೂರು ಏನಾದರೂ ಸೈ ಎಂದು ಹುಡುಕತೊಡಗಿದರು. ಹುಡುಗ ಒಂದು ಇಟ್ಟಿಗೆ ತುಂಡು ತಂದುಕೊಟ್ಟ. ನಾಯಿಗೆ ಬೀರಿದ್ದೇ ತಡ, ಗಡವನ ದವಡೆಗೆ ಆ ಏಟು ಬಿದ್ದು ಅದು ಬಾಯಿ ಬಿಟ್ಟಿತು. ಹಂಡಹುಂಡದ ಸುತ್ತ ಗಾಡಿ ಚಕ್ರ ಬಿತ್ತು. ಗಡವ ಹೆಣ್ಣನ್ನು ನೋಡಿ ಆ ಕಡೆ ಓಡಿತ್ತು. ಹಂಡಹುಂಡ ಈ ಅತೀವ ನೋವಿನಲ್ಲಿ ಪ್ರೇಮಿಸುವುದು ಅಸಾಧ್ಯ, ಮತ್ತು 'ಪ್ರಾಣಕ್ಕೆ ಅಪಾಯ' ಎಂದು ಅಂಜಿ ತನಗೆ ತಾನೆ ಸಮಾಧಾನ ಕೊಟ್ಟುಕೊಂಡು ಗಡವನನ್ನ ಬೈಯುವ ಹಾಗೆ ಬೊಗಳುತ್ತ ಓಡಿಹೋಯ್ತು. ಗಡವಕ್ಕೆ ಅದು ಕೇಳಿದರೂ – ಹೆಣ್ಣಿನ ಜತೆ ಮಾತಾಡುವ ಉಮೇದಿನಿಂದ ಅದರ ಬೆನ್ನು ಹತ್ತಿತ್ತು. ಹೆಣ್ಣಿಗೂ ಆ ರಾಕ್ಷಸನನ್ನು ಎದುರು ಹಾಕಿಕೊಂಡರೆ ಕಾಲು ಕಣ್ಣು ಯಾವುದಾದರೂ ಕಿತ್ತು ಬರುವುದು ಗ್ಯಾರಂಟಿ ಎನ್ನಿಸಿ ಸುಮ್ಮನೆ ಗುರ್ ಗುರ್ ಎಂದು ಬೈಯತೊಡಗಿತು. ಗಡವನಿಗೆ ಆಲಾಪನೆಯಿಂದ ಒಂದು ಉತ್ತೇಜನ ಸಿಕ್ಕಂತಾಗಿ ಹೆಣ್ಣಿನ ಬೆನ್ನುಹತ್ತಿತು. ಹುಡುಗ ಗಾಡಿ ಬಿಡುತ್ತ ಓಡಿದ.

ಮುಕುಂದರಾಯರಿಗೆ ನಾಯಿ, ಕತ್ತೆ, ದನ ಎತ್ತು, ಕೋಳಿಗಳು ಎಲ್ಲ ರಸ್ತೆ ತುಂಬ ರಸ್ತೆಯನ್ನು ಹಾಸಿಕೊಂಡು ಮನೆ ಮಾಡಿಕೊಂಡು ಬಾಗಿಲಿಲ್ಲದ ಮನೆಯಲ್ಲಿ ಪ್ರೇಮಿಸುತ್ತ, ಸೃಷ್ಟಿಸುತ್ತ ಬಸಿರು ಹೊತ್ತು ಮರಿ ಹಾಕಿ ಮತ್ತೆ ರಸ್ತೆಗೆ ಬಿಡುವ ಪರಿ ಕಂಡು ಖುಷಿಯಾಯಿತು. ಮನುಷ್ಯನಿಗೆ ಮಾತ್ರ ಮನೆ, ಗೋಡೆ, ಕಿಟಿಕಿ, ಪಲ್ಲಂಗ, ಮೆತ್ತನೆಯ ಹಾಸಿಗೆ, ದೀಪ ಕತ್ತಲೆ, ಘಮಗುಡುವ ಅಗರ ಬತ್ತಿ... ಏನೆಲ್ಲಾ ಬೇಕು. ವಾಲಗ ಬೇಕು. ಹಾಡು ಹಸೆ ಬೇಕು. ಕೊಡೋದು ಬಿಡೋದು ಬೇಕು. ನೆಂಟರು ಬೇಕು, ಬಸ್ ಬೇಕು, ಛತ್ರ ಪುರೋಹಿತರು ಬೇಕು, ಗಂಡಿಗೊಂದು ಹೆಣ್ಣು ಸಿಗಲು ಇವೆಲ್ಲಾ ಬೇಕು. ಅದರ ಬದಲು ನಾಯಿ, ಎತ್ತು, ಕೋಳಿ ಮರದ ಮೇಲಿನ ಮಂಗ ಅಳಿಲು ಇವು ಒಂದಕ್ಕೊಂದು ಸಿಗುವವರೆಗೆ ಸಾಗಿ, ಸಾಗಿ ಬೇಕಾಗುವವರೆಗೆ ಪುಸಲಾಯಿಸಿ ಬೇರೊಂದಕ್ಕೆ ಸಿಗದಂತೆ ಜಗಳವಾಡಿ ಕಡೆಗೂ ಹೆಣ್ಣೊಂದನ್ನ ವಶಪಡಿಸಿಕೊಂಡು, ಗಂಡು ಅದರ ಒಳಹೊಕ್ಕು, ಒಡಲ ತುಂಬ ಪ್ರೀತಿ, ಮೈ ತುಂಬ ಪ್ರೀತಿ, ಕಣ್ಣಿಗೊಂದು ಪ್ರೀತಿ, ಕಾಲಿಗೊಂದು ಪ್ರೀತಿ, ತುಂಬಿ ತುಂಬಿ ಕೊಡುತ್ತ, ತಾಯಿ ಮರಿಗಳನ್ನ ಪಡೆದು ಅವಕ್ಕೆ ಓಡುವುದನ್ನ, ಉಣ್ಣುವುದನ್ನ, ಸಂಪಾದಿಸುವುದನ್ನ ಕಲಿಸಿ, ಮಾತು ಕಲಿಸಿ, ಜಗಳ ಕಲಿಸಿ, ಬೀದಿ ಎಂಬ ಮನೆಗೆ, ಮರ ಎಂಬ ಮನೆಗೆ ಬಿಡುತ್ತವೆ. ನಾಯಿಗಳೆ ವಾಸಿ ಎನ್ನಿಸಿತು. ಅದಕ್ಕೆ ಮನೆ ಎಂಬುದಿಲ್ಲ. ಅಥವ ಎಲ್ಲಿದ್ದರೆ ಅಲ್ಲೇ ಮನೆ. ಮರೆತುಹೋಗಲು ಸಾಧ್ಯವೇ ಇಲ್ಲ. ಇವತ್ತು ಇಲ್ಲಿ. ನಾಳೆ ಅಲ್ಲಿ. ನಾಡಿದ್ದು ಇನ್ನೆಲ್ಲೋ...

ಈ ನಾಯಿಗಳ ಬೆನ್ನುಹತ್ತಿ ಹೋದರೆ ತನ್ನ ಮನೆ ಸಿಕ್ಕೀತೆ? ಎಂದುಕೊಂಡು ನಾಯಿಗಳನ್ನು



ನೋಡಿದರೆ ಆ ನಾಯಿಗಳು ಒಂದನ್ನೊಂದು ಬೆನ್ನುಹತ್ತಿ ಚೆನ್ನಾಟವಾಡುತ್ತಿವೆ. ಗಡವ ಹೆಣ್ಣನ್ನ ಮೂಸುತ್ತ, ಅದು ಗೆಬರಿದರೆ ಕಚ್ಚದಂತೆ ಸುಮ್ಮಗುಳಿದು, ಬೊಗಳಿ ಬೈದರೆ ಕುಂಯ್ ಕುಂಯ್ ಎಂದು ಹೂಗುಡುತ್ತ ಆ ಆಟಕ್ಕೆಲ್ಲ ತನ್ನ ಮೈ ಕೊಡುತ್ತಿದೆ. ಮುಂದಿನದಕ್ಕೆ ಇದು ತಾಲೀಮೆ? ನಾಯಿಗಳು ಒಂದನ್ನೊಂದು ಮುದ್ದಿಸಿ ಸಾಕಾದವು. ಬೈದು ಬೈದು ಸಾಕಾದವು. ಕಚ್ಚಿ ಕಚ್ಚಿ ಸಾಕಾದವು. ನಾಲಿಗೆಯಿಂದ ನೆಕ್ಕಿ ನೆಕ್ಕಿ ಸಾಕಾದವು. ಕಡೆಗೆ ಗಂಡೆಂಬ ಧೀರನಿಗೆ ಅವನ ಕಾಲೆಂಬ ಕೈಗಳಿಗೆ ಹೆಣ್ಣು ತನ್ನ ನೀಡಿಕೊಂಡು, ಗಂಡು ಜಗತ್ತನ್ನ ಕಣ್ಣಿಗೆ, ಕಾಲಿಗೆ, ಕೈಗೆ ನಾಲಿಗೆಗೆ ತಂದು ಕೊಂಡು ಕಣ್ಣ ತುಂಬ ಸೂರ್ಯ–ಚಂದ್ರರನ್ನ ತಂದುಕೊಂಡು ಆಗಸದ ನೀಲಿ, ಆಗಸದ ಮೋಡ, ಬಿಸಿಲು ನೆರಳುಗಳ ತಂದುಕೊಂಡು, ದಾಹ ತಂದುಕೊಂಡು, ಹೆಣ್ಣಿಗೆ ಅವನ್ನೆಲ್ಲ ಒಂದೊಂದನ್ನೆ ಕೊಡುತ್ತ ಹೋಯಿತು. ಹೆಣ್ಣಂತೂ ಆ ಧಾರೆಯನ್ನು ಸ್ವೀಕರಿಸುತ್ತ ಅಲ್ಲಿಂದಲ್ಲಿಗೇ ಪಡೆದುಪಡೆದು ಧ್ಯಾನಿಸುತ್ತ, ತುದಿಯೆಂಬ ತುದಗೇರಿ, ಜಾರಿ ಜಾರಿ ಏರಿಳಿಯುತ್ತಿದೆ. ನೆಲಕ್ಕೆ ಬಾನು ಬಂತು, ನೆಲಕ್ಕೆ ದೇವತೆಗಳು ಬಂದರು. ತೇರು ಬಂತು. ನದೆದಾಡುವ ಆನಂದ ಬಂದಿತು. ಹೂವೆಲ್ಲ ಬಾಯ್ದೆರೆದು ಗಾಳಿ ತುಂಬ ಗಂಧ ತೀಡಿದವು. ಸುತ್ತ ಮುತ್ತ ಇದ್ದವೆಲ್ಲ ಈ ಎರಡರಲ್ಲೆ ಮಿಳಿತವಾಗಿ ಏನೂ ಏನೂ ಇವಾಗಿ ಎಲ್ಲ ಬಂದು ಇಲ್ಲೇ ಸೇರಿ ನಾಯಿಗಳೆಂಬ ದೇವರಿಗೆ ಹಗಲೆಂಬ ಬೆಳದಿಂಗಳು ಚಾದರವಾಗಿ ಸೂರ್ಯ ಸಹ ನಾಚಿಕೊಂಡು ಚಿಕ್ಕದೊಂದು ಮೋಡ ಕಂಡು ಅಲ್ಲಿ ತಾನು ಸೇರಿಕೊಂಡ... ಮುಕುಂದ ರಾಯರು 'ಉಶ್' ಎಂದು ಒಂದು ಉಸಿರು ಹೊರಹಾಕಿದರು.

ನಡೆಯುತ್ತ ನಡೆಯುತ್ತ ಬಂದ ಮುಕುಂದರಾಯರಿಗೆ ಒಂದು ಶಾಲೆ ಸಿಕ್ಕಿತು. ಮಧ್ಯಾಹ್ನದ ಬೆಲ್ಲಾಗಿ, ಎದುರಿನ ಬಯಲಲ್ಲಿ ಮರದಡಿಯಲ್ಲಿ ಹುಡುಗರು ಹುಡುಗಿಯರು ಡಬ್ಬಿ ತೆಗೆದು ಉಣ್ಣತೊಡಗಿದ್ದು, ನೀರು ಕುಡಿಯುವುದೆಲ್ಲ ನೋಡಿ ಇವರ ಹೊಟ್ಟೆ ಚುರು ಚುರು ಅನ್ನತೊಡಗಿತು. ಆ ಪುಟ್ಟ ಹುಡುಗಿಯರು ಮಾತಾಡುತ್ತ ಊಟ ಮಾಡುವುದನ್ನ ನೋಡಿ ತನಗೆ ಒಂದೊಂದ್ ತುತ್ತು ಹಾಕಿದರೆ ಸಾಕು ಎಂದು ಅವರ ಬಳಿ ಹೋದರು. 'ಪುಟ್ಟ ನಂಗೊಂದು ತುತ್ತು' ಎಂದು ಕೈನೀಡಿದರು. ಒಂದು ಹುಡುಗಿ 'ಥೂ ನಾಚ್ಕೆ ಆಗಲ್ವ?' ಎಂದು ಕೈಲಿದ್ದ ತುತ್ತನ್ನ ಬಾಯಿಗಿಕ್ಕಿತು. ಅದರ ಪಕ್ಕದಲ್ಲಿದ್ದ ಹುಡುಗಿ 'ಏ ತುಂಬ ಹಸ್ದಿದ್ದಾರೆ ಅಂತ ಕಾಣುತ್ತೆ, ಹಾಗನ್ಬಾರದು...' ಎಂದು ಪುಟ್ಟ ಕೈಗೆ ಹುಳಿ ಅನ್ನ ತೆಗೆದುಕೊಂಡು ಉಂಡೆ ಮಾಡಿ ಆ ಉಂಡೆಯನ್ನು ನಿಂಬೆಹಣ್ಣಿನಾಕಾರಕ್ಕೆ ತಂದು 'ಹಿಡೀರಿ' ಎಂದು ಇವರ ಕೈಗೆ ಹಾಕಿತು. ಆ ತುತ್ತು ರಾಯರ ಬಾಯಿ ಸೇರಿ ಜಗಿಯುತ್ತಿರುವಾಗ ಉಳಿದವು ತುತ್ತು... ಚಿತ್ರಾನ್ನ, ಪಲಾವ್, ರವಾಬಾತ್, ಇಡ್ಲಿ, ದೋಸೆ ಎಲ್ಲಾ ಹೊಟ್ಟೆ ತುಂಬಿ, ತೇಗು ಬಂದಿತು. ಥ್ಯಾಂಕ್ಸ್ ಎಂದರು. ಅಷ್ಟರಲ್ಲಿ ಬೆಲ್ಲಾಯಿತು. ಆ ಹುಡುಗಿಯರು ಡಬ್ಬ ಮುಚ್ಚಿ ಲಂಗದ ತುದಿಗೆ ಅಂಗೈ ಮುಂಗೈ ಒರೆಸುತ್ತ ಬೇಗ ಬೇಗ ಓಡತೊಡಗಿದರು. ಬಯಲು ಖಾಲಿ ಖಾಲಿ.

ರಾಯರು ಮರದ ನೆರಳಿಗೆ ನಡೆದು ಆ ಮರದ ಮೈಗೆ ಮೈ ಒರಗಿಸಿದರು... ನಿದ್ದೆ ಬಂದು ಕಣ್ಣು ತುಂಬುತ್ತ ಮರದೊಂದಿಗೆ ಮರವಾಗಿ ಹೋದರು.

ದೊಡ್ಡ ಕೂಗಿಗೆ ಎಚ್ಚರವಾಗಿ ನೋಡಿದರೆ ಒಂದು ಹುಡುಗರ ದಂಡು ಆ ಮರದ ಬುಡಕ್ಕೆ ಬಂದಿದೆ. ಚಿನ್ನಿ ದಾಂಡು ಅಡಲು ಬದ್ ಹುಡುಕುತ್ತ, ಚಿನ್ನಿಯನ್ನ ಒಬ್ಬ ನೆಲಕ್ಕಿಟ್ಟ... ಕೈಗೆ ಮಣ್ಣು ಬಳಿದುಕೊಂಡು 'ರಡೀ', ಎಂದ. 'ಬೀಸ್' ಎಂಬ ಕೂಗಿಗೆ ಚಿನ್ನಿ ನೆಲದಿಂದೆಗರಿತು. ದಾಂಡಿನ ಬೀಸಿಗೆ ಸಿಕ್ಕ ಚಿನ್ನಿ ರೆಕ್ಕೆ ಬಂದ ಹಕ್ಕಿಯ ಹಾಗೆ ಹಾರಿತು. ಉಳಿದವರು ದಾಂಡಿನಿಂದ ಬದ್ದಿನ ಕಡೆಗೆ 'ಸ್ಕೋರ್' ಹೇಳಿದ್ದನ್ನು ಅಳೆಯಹೊರಟರು. ನೂರು ಖಂಡಿತ ಆಗಲ್ಲ ಎಂಬ ಉತ್ಸಾಹದಿಂದ ಅಳೆಯುತ್ತಿದ್ದಾತ ಇಪ್ಪತ್ತೈದು, ಇಪ್ಪತ್ತೇಳು... ಎಂದು ಎಣಿಸುತ್ತ ಬದ್ದಿನ ಬುಡ ಹತ್ತಿರಾದಂತೆ ಆಡಿದವನು ಆಗಲೇ ಕಳ್ಳನ ಕಳೆ ಹೊರತೊಡಗಿದ. ನೂರು ಬದ್ದಿಗೆ ಮುಂಚೇನೇ ಮುಗಿದು ಅಳೆಯುತ್ತಿದ್ದಾತ ದಾಂಡ್ ಎಸೆದ. ಮೊದಲಿನ ಹುಡುಗ ಮತ್ತೆ 'ರಡೀ' ಅಂದ. ಇನ್ನೊಬ್ಬ ಹುಡುಗ 'ಬೀಸ್' ಎಂದ. ಮತ್ತೆ ಚಿನ್ನಿ ಎಗರಿತು. ಗಿಲ್ಲಿ ಎತ್ತಿ ಬಾರಿಸಿದಾಗ ಅದು ಗಿರಿ ಗಿರಿ ತಿರುಗುತ್ತಾ ಆಗಸದ ಕಡೆ ಹಾರಿ, ಗಡಿಯಾರದ ಮರದ ಕೊಂಬೆ ದಾಟಿ ಆಗಸದ ಮೋಡದಲ್ಲೇ ಸಿಕ್ಕಿಕೊಂಡಿತೆ? ನೆಲಕ್ಕೆ ಬಿತ್ತೆ? ಚಿನ್ನಿ ಹುಡುಕುವ ಕೆಲಸ ಮುಂದುವರೆಯಿತು. ಎಲ್ಲಿ ಬಿತ್ತೋ ತಿಳಿಯಲಿಲ್ಲ. ಆ ಚಿನ್ನಿ ದಾಂಡು ಎಗರಿಸಬೇಕೆಂದು ಕಾದಿದ್ದ ಒಬ್ಬ ಹುಡುಗ ಅಣಕಿಸುತ್ತ ಕುಣಿಯತೊಡಗಿದ. ಚಿನ್ನಿ ದಾಂಡಿನ ಹುಡುಗ 'ನನ್ ಚಿನ್ನಿ ಕೊಟ್ರೆ ಸರಿ' ಎಂದು ರಾಗ ಪಾಡತೊಡಗಿದ. ಆಡುತ್ತಿದಾತನಿಗೆ ರಾಜ್ಯ ಗೆದ್ದ ಖುಷಿಯಾಗಿತ್ತು. 'ಹ್ಯಾಗಿದೆ ಹೊಡ್ತ?' ಎಂದು ಅವನು ಬೀಗಿದ. ಚಿನ್ನಿ ಕಳೆದುಕೊಂಡವನು ನೆಲದ ಮೇಲೆ – ಗಡಿಯಾರದ ಹೂಗಳು, ಮಸಾಲ ಮಂಡಕ್ಕಿ ಪಟ್ಣ, ಕಳ್ಳೇಕಾಯಿ ಸಿಪ್ಪೆ, ಇತ್ಯಾದಿಗಳನ್ನು ಕೆದರುತ್ತ ಚಿನ್ನಿಯ ತಲಾಶ್‌ನಲ್ಲಿದ್ದ. 'ಹೋದ್ರೆ ಹೋಗ್ಲಿ ಬಿಡಲೆ' ಎಂದು ದಾಂಡೊಂದನ್ನೆ ಆಡಿಸುತ್ತಿದ್ದ ಹುಡುಗ, 'ನಾನು ಜೋರಾಗಿ ಹೊಡೆದಿದ್ರೆ ನಿನು ಕ್ಯಾಚ್ ಹಿಡೀತಿದ್ದೆ. ಆಗ ನಾನು ಕಳ್ಳ ಆಗ್ತಿದ್ದೆ ಅಲ್ವ?' ಎಂದು ಸಮಜಾಯಿಷಿ ನೀಡಿದ. ಅವನ ಮಾತು ಚಿನ್ನಿಯ ಹುಡುಗನನ್ನು